# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 755(936)
ಉತ್ತರಿಸಬೇಕಾದ ದಿನಾಂಕ : 13.12.2023
ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್( ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಜಾರಿಯಲ್ಲಿರುವ ಸಾಮಾಜಿಕ ಭದ್ರತಾ ಯೋಜನೆಗಳು ಯಾವುವು; ಈ ಯೋಜನೆಯ ಲಾಭ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಫಲಾನುಭವಿಗಳ ವಿವರವನ್ನು ಯೋಜನೆವಾರು ನೀಡುವುದು) | ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ಅಶಕ್ತ ಹಾಗೂ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತಾ ಯೋಜನೆಗಳಡಿ ಆರ್ಥಿಕ ಸಹಾಯ ಒದಗಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಲು ಈ ಕೆಳಕಂಡ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಒಟ್ಟು 78.22 ಲಕ್ಷ ಫಲಾನುಭವಿಗಳು ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ. ವಿವಿಧ ಪಿಂಚಣಿ ಯೋಜನೆಗಳಡಿ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |
| ಆ) | ಈ ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನದ ವಿವರವನ್ನು ಯೋಜನೆವಾರು ನೀಡುವುದು; | ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಫಲಾನುಭವಿಳಿಗೆ ನೀಡುತ್ತಿರುವ ಮಾಸಾಶನದ ವಿವರ ಕೆಳಗಿನಂತಿದೆ. |

| ಕ್ರ ಸಂ | ಯೋಜನೆ | ಪಿಂಚಣಿ ಮೊತ್ತ [ರೂ.ಗಳಲ್ಲಿ] |
|---|---|---|
| 1 | ವೃದ್ಧಾಪ್ಯ ವೇತನ : | |
| | 60 ರಿಂದ 64 ವರ್ಷದೊಳಗಿನವರಿಗೆ | 600/- |
| | 65 ವರ್ಷ ಮೇಲ್ಪಟ್ಟವರಿಗೆ | 1,200/- |
| 2 | ವಿಧವಾ ವೇತನ | 800/- |
| 3 | ಅಂಗವಿಕಲ ವೇತನ : | |
| | ಶೇಕಡ 40% ರಷ್ಟು ಅಂಗವಿಕಲತೆಯುಳ್ಳವರಿಗೆ | 800/- |
| | ಶೇಕಡ 75%ಕ್ಕಿಂತ ಹೆಚ್ಚು ಅಂಗವಿಕಲತೆ ಯುಳ್ಳವರಿಗ | 1,400/- |
| | ಶೇಕಡ 75%ಕ್ಕಿಂತ ಹೆಚ್ಚು ಮನೋವೈಕಲ್ಯತೆ ಹೊಂದಿರುವವರು | 2,000/- |
| 4 | ಸಂಧ್ಯಾ ಸುರಕ್ಷಾ ವೇತನ | 1,200/- |
| 5 | ಮನಸ್ವಿನಿ ಯೋಜನೆ | 800/- |
| 6 | ಮೈತ್ರಿ ಯೋಜನೆ | 800/- |
| 7 | ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ | 2,000/- |
| 8 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | 10,000/- |
| 9 | ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತವೇತನ | |
| | ಶೇಕಡ 25% ರಿಂದ 59% ಅಂಗವಿಕಲತೆ ಹೊಂದಿರುವವರು | 2,000/- |
| | ಶೇಕಡ 60%ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | 4,000/- |

| | | |
|---|---|---|
| ಇ) | ಯೋಜನೆಯ ಫಲಾನುಭವಿಗಳ ಖಾತೆಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಮಾಸಾಶನ ಪಾವತಿ ಆಗದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಯನ್ನು National payment corporation of India [NPCI] ಮೂಲಕ ನಿರ್ವಹಿಸಲಾಗುತ್ತಿದ್ದು, ಎಲ್ಲಾ ಅರ್ಹ ಫಲಾನುಭವಿಗಳಿಗೂ ಜಿಲ್ಲಾ ಖಜಾನೆಯಲ್ಲಿ ಬಿಲ್ಲು ತಯಾರಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗಿದೆ.<br>ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ / IFSC CODE / PIN CODE ಮಾಹಿತಿಯನ್ನು ನಿಖರವಾಗಿ ನೀಡದೇ ಇರುವ ಪ್ರಕರಣಗಳು NPCI ನಿಂದ ಸ್ವೀಕೃತವಾದ NO SUCH ACCOUNT / INVALID BANK DETAILS ಮತ್ತು INVALID ADDRESS ಕಾರಣದಿಂದ 9273 ಪ್ರಕರಣಗಳಲ್ಲಿ ಪಿಂಚಣಿ ಪಾವತಿ ವಿಫಲವಾಗಿರುವುದು ಕಂಡುಬಂದಿರುತ್ತದೆ. ಪಿಂಚಣಿ ಪಾವತಿ ವಿಫಲವಾದ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ತಂತ್ರಾಂಶದಲ್ಲಿ ಪಡೆಯಲು ಅವಕಾಶ ಕಲ್ಪಿಸಲಾಗಿದ್ದು, ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನ್ಯತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ನ್ಯೂನ್ಯತೆಯನ್ನು ಸರಿಪಡಿಸಿ ತಂತ್ರಾಂಶದಲ್ಲಿ ತಹಶೀಲ್ದಾರರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |
| ಈ) | ಸದರಿ ಯೋಜನೆಗಳ ಪೈಕಿ ವೃದ್ಧಾಪ್ಯ ಹಾಗೂ ವಿಧವಾ ವೇತನವನ್ನು ಏರಿಕೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು? | ಸರ್ಕಾರದ ಆದೇಶ ಸಂಖ್ಯೆ ಡಿಎಸ್ಎಸ್‌ಪಿ-ಎಂಐಎಸ್‌ಸಿ-2021 ಬೆಂಗಳೂರು ದಿನಾಂಕ; 18-09-2021 ರನ್ವಯ ವೃದ್ಧಾಪ್ಯ ವೇತನ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ನೀಡಲಾಗುತ್ತಿದ್ದ ಪಿಂಚಣಿಯನ್ನು ರೂ 1000/- ರಿಂದ ರೂ 1200/- ಹೆಚ್ಚಿಸಿ ಆದೇಶಿಸಲಾಗಿದ್ದು ಇದರಿಂದ 12,50,063 ಫಲಾನುಭವಿಗಳಿಗೆ ಪ್ರಯೋಜನವಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ ಕಂಇ 39 ಎಮ್‌ಎಸ್‌ಟಿ 2021 ಬೆಂಗಳೂರು ದಿನಾಂಕ: 31-07-2021 ರನ್ವಯ ವಿಧವಾ ವೇತನ ಯೋಜನೆಯಡಿ ನೀಡಲಾಗುತ್ತಿದ್ದ ಪಿಂಚಣಿಯನ್ನು ರೂ 600/- ರಿಂದ 800/-ಕ್ಕೆ ಹೆಚ್ಚಿಸಿ ಆದೇಶಿಸಲಾಗಿದ್ದು, ಇದರಿಂದ 17,88,656 ಫಲಾನುಭವಿಗಳಿಗೆ ಪ್ರಯೋಜನವಾಗುತ್ತಿದೆ.<br>ಇತ್ತೀಚಿಗಷ್ಟೇ ವೃದ್ಧಾಪ್ಯ ವೇತನ ಮತ್ತು ವಿಧವಾ ವೇತನ ಯೋಜನೆಗಳಲ್ಲಿ ಪಿಂಚಣಿ ಮೊತ್ತವನ್ನು ಹೆಚ್ಚಿಸಿರುವುದರಿಂದ ಮತ್ತೆ ಪಿಂಚಣಿ ಮೊತ್ತವನ್ನು ಹೆಚ್ಚಿಸಲು ಪ್ರಸ್ತಾಪ ಇರುವುದಿಲ್ಲ. |

**ಕಡತ ಸಂಖ್ಯೆ:ಆರ್‌ಡಿ 41 ಕೆಎಟಿ ಎಸ್‌ಎಸ್‌ಪಿ 2023**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರ ಸಂ 755(936) ಕ್ಕೆ ಅನುಬಂಧ | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| District Name | OAP_1 | OAP_2 | OAP_3 | SSY | DWP | PHP_1 | PHP_2 | PHP_3 | MYT | MAN | AVP | FWP | EDP_1 | EDP_2 | Total |
| Bagalkot | 14715 | 14788 | 242 | 101096 | 69415 | 16068 | 18440 | 2601 | 114 | 3794 | 0 | 170 | 0 | 0 | 241443 |
| Ballari | 9843 | 33806 | 614 | 34494 | 46936 | 7256 | 10465 | 2352 | 169 | 2070 | 0 | 96 | 0 | 0 | 148101 |
| Bangalore Rural | 12741 | 33622 | 403 | 43404 | 31933 | 6060 | 6034 | 1436 | 36 | 1945 | 1 | 20 | 0 | 0 | 137635 |
| Belagavi | 37946 | 70847 | 4536 | 372811 | 138754 | 29628 | 56055 | 7702 | 148 | 11667 | 2 | 514 | 0 | 0 | 730610 |
| Bengaluru | 36936 | 69412 | 5352 | 172214 | 139036 | 13978 | 29453 | 6066 | 273 | 4400 | 5 | 5 | 0 | 0 | 477130 |
| Bidar | 23391 | 37439 | 1054 | 109228 | 47913 | 16147 | 20988 | 3422 | 45 | 1649 | 3 | 411 | 0 | 0 | 261690 |
| Chamarajanagar | 27218 | 76763 | 2758 | 34295 | 42494 | 8607 | 11428 | 1000 | 82 | 8731 | 0 | 29 | 0 | 0 | 213405 |
| Chikballapur | 24570 | 25818 | 1583 | 88853 | 39614 | 7652 | 14431 | 1993 | 79 | 4070 | 2 | 42 | 0 | 0 | 208707 |
| Chikkamagaluru | 11451 | 26370 | 2005 | 80670 | 36189 | 5482 | 9487 | 1293 | 16 | 2778 | 4 | 396 | 0 | 0 | 176141 |
| Chitradurga | 21449 | 20957 | 467 | 124512 | 51815 | 11132 | 27346 | 1611 | 39 | 4992 | 0 | 215 | 0 | 0 | 264535 |
| Dakshina Kannada | 14249 | 19177 | 3099 | 62225 | 48801 | 8410 | 7221 | 1969 | 12 | 6190 | 1 | 28 | 953 | 2798 | 175133 |
| Davanagere | 26564 | 42656 | 494 | 88165 | 54308 | 8766 | 15366 | 3777 | 45 | 5170 | 1 | 161 | 0 | 0 | 245473 |
| Dharwad | 17344 | 37766 | 1492 | 64051 | 54321 | 11020 | 30170 | 1796 | 48 | 6392 | 0 | 290 | 0 | 0 | 224690 |
| Gadag | 15206 | 35241 | 336 | 32932 | 38399 | 11056 | 10785 | 1715 | 18 | 3018 | 0 | 170 | 0 | 0 | 148876 |
| Hassan | 43141 | 97681 | 3162 | 91849 | 65545 | 12586 | 10627 | 2115 | 7 | 4976 | 1 | 423 | 0 | 0 | 332113 |
| Haveri | 17551 | 17759 | 900 | 104833 | 58651 | 15205 | 24616 | 2934 | 36 | 2432 | 3 | 418 | 0 | 0 | 245338 |
| Kalaburagi | 22860 | 39737 | 488 | 125678 | 59308 | 17691 | 25245 | 6219 | 125 | 2835 | 0 | 334 | 0 | 0 | 300520 |
| Kodagu | 5761 | 8249 | 1580 | 20572 | 15202 | 1829 | 2981 | 613 | 1 | 1168 | 0 | 76 | 0 | 0 | 58032 |
| Kolar | 15130 | 45900 | 1140 | 87112 | 47789 | 6267 | 14514 | 2331 | 59 | 1964 | 4 | 31 | 0 | 0 | 222241 |
| Koppal | 14533 | 21815 | 543 | 78134 | 45935 | 11221 | 16858 | 4215 | 45 | 3217 | 1 | 147 | 0 | 0 | 196664 |
| Mandya | 50322 | 81540 | 4519 | 94025 | 85095 | 14826 | 14208 | 2665 | 25 | 5928 | 0 | 391 | 0 | 0 | 353544 |
| Mysuru | 31288 | 44698 | 2509 | 155075 | 107709 | 14648 | 20212 | 2865 | 75 | 10591 | 3 | 437 | 0 | 0 | 390110 |
| Raichur | 20177 | 56641 | 1419 | 103773 | 59692 | 9521 | 17271 | 3222 | 78 | 3858 | 2 | 110 | 0 | 0 | 275764 |
| Ramanagara | 18542 | 49583 | 3199 | 77880 | 45538 | 7431 | 7658 | 1502 | 37 | 3782 | 3 | 56 | 0 | 0 | 215211 |
| Shivamogga | 14470 | 23020 | 1751 | 70667 | 49163 | 6901 | 11530 | 2280 | 19 | 3496 | 3 | 204 | 0 | 0 | 183504 |
| Tumakuru | 42445 | 45374 | 2632 | 206725 | 91769 | 19015 | 24080 | 3606 | 80 | 11604 | 6 | 233 | 0 | 0 | 447569 |
| Udupi | 10424 | 17412 | 3780 | 64406 | 35592 | 5786 | 5598 | 1337 | 37 | 4067 | 1 | 12 | 518 | 1024 | 149994 |
| Uttara Kannada | 17127 | 24268 | 1696 | 54979 | 38284 | 8923 | 6252 | 1969 | 3 | 2448 | 1 | 86 | 634 | 912 | 157582 |
| Vijayanagar | 18843 | 22908 | 159 | 50189 | 48536 | 10621 | 12462 | 1752 | 113 | 2245 | 0 | 125 | 0 | 0 | 167953 |
| Vijayapura | 26516 | 36494 | 419 | 138284 | 62389 | 15169 | 16351 | 3286 | 166 | 7275 | 2 | 209 | 0 | 0 | 306560 |
| Yadgir | 10702 | 17863 | 128 | 79523 | 32531 | 4453 | 17536 | 1465 | 53 | 2215 | 0 | 229 | 0 | 0 | 166698 |
| Total | 673455 | 1195604 | 54459 | 3012654 | 1788656 | 343355 | 515668 | 83109 | 2083 | 140967 | 49 | 6068 | 2105 | 4734 | 7822966 |